ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಸಂಪಾದಕ : ಮಂಜು ಬನವಾಸೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.02 | Issue. 52 | Pages. 2 | Date: 23-01-2026, FRIDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 52 - ಪುಟಗಳು : 2 23-01-2026 ಶುಕ್ರವಾರ Ph: 8762954248 ದರ : ₹1

# ರಾಜ್ಯ ಸರ್ಕಾರದ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ

## ಜಿಲ್ಲೆಯ ಅಭಿವೃದ್ಧಿಗೆ ಗಮನ ಹರಿಸಿ | ಕೇಂದ್ರ ಸಚಿವ ಹೆಚ್‌ಡಿಕೆಗೆ ಸಂಸದರ ಟಾಂಗ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರದ ಸಾಧನೆ ಸಹಿಸಲಾಗದೆ ಇಲ್ಲಸಲ್ಲದ ಆರೋಪ ಮಾಡುತ್ತಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಕುರಿತು ಹಗುರವಾಗಿ ಮಾತನಾಡುವ ಮೊದಲು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಂಸದ ಶ್ರೇಯಸ್ ಪಟೇಲ್ ಟಾಂಗ್ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ರಾಜ್ಯ ಸರ್ಕಾರದ ಕುರಿತು ಮಾತನಾಡುವ ನೈತಿಕತೆ ಜೆಡಿಎಸ್ ನಾಯಕರಿಗೆ ಇಲ್ಲ. ಇವರು ಮೊದಲು ಯಾರ ಜೊತೆ ಮೈತ್ರಿ ಮಾಡಿಕೊಂಡಿದ್ದರು, ಯಾರಿಂದ ಹೇಗೆ ಲಾಭ ಪಡೆದುಕೊಂಡರು. ಈಗ ಯಾರ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆಂಬುದು ರಾಜ್ಯದ ಜನರಿಗೆ ಗೊತ್ತಿದೆ. ಜ. 24 ರಂದು ಹಾಸನದಲ್ಲಿ ಪಕ್ಷ ಸಂಘಟನೆ ಉದ್ದೇಶದಿಂದ ಜೆಡಿಎಸ್ ಸಮಾವೇಶ ಮಾಡುತ್ತಿರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕುರಿತು ತುಚ್ಛವಾಗಿ ಮಾತನಾಡಿರುವುದು ಸರಿಯಲ್ಲ. ರಾಜ್ಯದ ಹಿರಿಯ ನಾಯಕರೆನಿಸಿಕೊಂಡಿರುವ ಅವರು ಏನಾದರೂ ಮಾತನಾಡುವ ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ.



ಭ್ರಷ್ಟಾಚಾರ ಮುಕ್ತ ಜಿಲ್ಲೆ ಮಾಡುವತ್ತ ಎಲ್ಲರೂ ಸಂಘಟಿತರಾಗಿ ಕೆಲಸ ಮಾಡುತ್ತಿದ್ದೇವೆ. ಜೆಡಿಎಸ್‌ನವರಿಗೆ ಅದನ್ನು ಸಹಿಸಲು ಆಗದೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಗ್ಯಾರಂಟಿ ಯೋಜನೆ ಜಾತಿ ಆಧಾರಿತ ಅಲ್ಲ

ಕಳೆದ ಎರಡೂವರೆ ವರ್ಷದಲ್ಲಿ ಕಾಂಗ್ರೆಸ್‌ನಿಂದ ಜಿಲ್ಲೆಯಲ್ಲಿ ಎರಡು ಸಮಾವೇಶ ಮಾಡಿದ್ದು, ಅದನ್ನು ಸಹಿಸಲು ಜೆಡಿಎಸ್ ನಾಯಕರಿಂದ ಆಗುತ್ತಿಲ್ಲ. ಕಾಂಗ್ರೆಸ್ ಜಾರಿಗೊಳಿಸಿರುವ ಪಂಚ ಗ್ಯಾರಂಟಿಗಳು ಜಾತಿ ಆಧಾರಿತವಲ್ಲ. ಇಂದಿರಾ ಗಾಂಧಿ ಕಾಲದಿಂದಲೂ ನಮ್ಮ ಪಕ್ಷ ಸರ್ವ ಜಾತಿಗಳ ಏಳಿಗೆಗೆ ಶ್ರಮಿಸುತ್ತಿದೆ. ನಮ್ಮ ಗ್ಯಾರಂಟಿಗಳು ಅಭಿವೃದ್ಧಿಗೆ ಪೂರಕವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಹಿಂದ ಮಾತ್ರವಲ್ಲದೆ ಎಲ್ಲಾ ಸಮುದಾಯಗಳ ಮೇಲೆ ಪ್ರೀತಿ ವಿಶ್ವಾಸವಿದೆ. ಆದ್ದರಿಂದಲೇ ಗ್ಯಾರಂಟಿ ಯೋಜನೆಗಳನ್ನು ಸರ್ವರಿಗೂ ಜಾರಿಗೊಳಿಸಿದ್ದಾರೆ. ಜಾತಿ ರಾಜಕಾರಣ ಮಾಡುವ ಇರಾದೆ ನಮ್ಮದಲ್ಲ ಎಂದು ತಿರುಗೇಟು ನೀಡಿದರು.

### ಹೆಚ್ಚುವರಿ ಅನುದಾನ ಭರವಸೆ

ಹಾಸನ ಮಹಾನಗರ ಪಾಲಿಕೆಗೆ ಅನುದಾನ ನೀಡಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಬಜೆಟ್ ಬಳಿಕ ವಿಶೇಷ ಅನುದಾನ ನೀಡುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ.

> ಮಹಾತ್ಮ ಗಾಂಧೀಜಿ ಅವರ ಹೆಸರಿದ್ದ ಮಾತ್ರಕ್ಕೆ ಮನರೇಗಾ ಯೋಜನೆ ಹೆಸರನ್ನು ವಿಬಿ-ಜಿ-ರಾಮ್ ಜಿ ಎಂದು ಬದಲಿಸಿದರು. ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮನಿಗೆ ಗೌರವಿಸುವುದು ಬಿಜೆಪಿಗೆ ಬೇಕಿಲ್ಲ. ಇದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಈ ವಿಚಾರದಲ್ಲಿ ಜೆಡಿಎಸ್ ನಾಯಕರು ಮೌನವಾಗಿರುವುದು ಏಕೆ.
>
> **- ಶ್ರೇಯಸ್ ಪಟೇಲ್, ಸಂಸದ**

### ನಿವೇಶನ ಹಂಚಿಕೆಗೆ ಕ್ರಮ: ಭರವಸೆ

ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಹಂಚಿಕೆಗೆ ಕ್ರಮ ವಹಿಸಲಾಗಿದೆ. ರೈಲ್ವೆ ಇಲಾಖೆಯಿಂದ ರಾಜೀವ್ ಕಾಲೇಜು ಹಾಗೂ ಗೆಂಡೆಕಟ್ಟೆ ಅರಣ್ಯ ಪ್ರದೇಶ ಬಳಿ ಪೈಪ್‌ಲೈನ್‌ಗೆ ಜಾಗ ಬಿಟ್ಟು ಕೊಡಬೇಕಿದೆ. ಈ ಸಂಬಂಧ ಶುಕ್ರವಾರ ಸಭೆ ಕರೆಯಲಾಗಿದೆ. 12 ಸಾವಿರ ನಿವೇಶನ ಹಂಚಲು ತಯಾರಿದ್ದು ಶೀಘ್ರ ಕ್ರಮ ವಹಿಸಲಾಗುವುದೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಖಾಲಿ ಹುದ್ದೆಗಳ ಭರ್ತಿ, ಮೂಲಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗಿದೆ. ಅದೇ ರೀತಿ ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪರಿಷ್ಕೃತ ವೆಚ್ಚ ನೀಡಲು ರಾಷ್ಟ್ರೀಯ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸಮ್ಮತಿ ಸೂಚಿಸಿದ್ದಾರೆ. ಮುಂದಿನ ವಾರದಿಂದ ಕಾಮಗಾರಿ ಪ್ರಾರಂಭವಾಗಲಿದೆ ಎಂದರು.

### ಭದ್ರಾ ಮೇಲ್ದಂಡೆಗೆ ಹಣ ನೀಡಲಿಲ್ಲ

ಜಿಲ್ಲೆಯ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಹಕರಿಸುತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 5,500 ಕೋಟಿ ರೂ. ನೀಡುವ ಭರವಸೆ ನೀಡಲಾಯಿತು ಹೊರತು ಇಲ್ಲಿವರೆಗೆ 55 ರೂಪಾಯಿ ಸಹ ಕೊಡಲಿಲ್ಲ. ಕೇಂದ್ರದಲ್ಲಿರುವುದು ರೈತ ವಿರೋಧಿ ಸರ್ಕಾರ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಮಲೆನಾಡು ಭಾಗದಲ್ಲಿ ಕಾಡಾನೆ ಮಾನವ ಸಂಘರ್ಷ ಮಿತಿ ಮೀರಿದ್ದು ಶಾಶ್ವತ ಪರಿಹಾರಕ್ಕೆ ಕ್ರಮ ವಹಿಸಿಲ್ಲ. ಜಿಲ್ಲೆಗೆ ಐಐಟಿ ಘೋಷಿಸುತ್ತಿಲ್ಲವೆಂದು ಆರೋಪಿಸಿದರು.

ಮಲೆನಾಡು ಭಾಗದಲ್ಲಿ ಕಾಡಾನೆ-ಮಾನವ ಸಂಘರ್ಷ ಇವತ್ತು ನಿನ್ನೆಯದಲ್ಲ. ಕೇಂದ್ರ ಹಾಗು ರಾಜ್ಯ ಸರ್ಕಾರ ಒಗ್ಗೂಡಿದರಷ್ಟೇ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸಾಧ್ಯ. ಈ ಸಂಬಂಧ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದ್ದು ಈ ಬಜೆಟ್‌ನಲ್ಲಿ ಅನುದಾನ ಮೀಸಲಿಡುವ ಭರವಸೆ ಇದೆ. ಅದೇ ರೀತಿ ವಿಮಾನ ನಿಲ್ದಾಣ ಕಾಮಗಾರಿಗೆ 147 ಕೋಟಿ ರೂ. ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ಮುಖಂಡರಾದ ಬನವಾಸೆ ರಂಗಸ್ವಾಮಿ, ರಘು ದಾಸರಕೊಪ್ಪಲು, ರಂಜಿತ್ ಗೊರೂರು, ಸಲೀಂ, ಶಶಿ, ದೇವರಾಜೇಗೌಡ ಇದ್ದರು.

## ಗೊರೂರಿನಲ್ಲಿ ಪೌರಾಣಿಕ ನಾಟಕೋತ್ಸವ ನಾಳೆಯಿಂದ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಗೊರೂರು ಯೋಗಾನರಸಿಂಹ ಸ್ವಾಮಿ ರಥೋತ್ಸವ ಅಂಗವಾಗಿ ಜ. 24 ರಿಂದ 26ರ ವರೆಗೆ ಪೌರಾಣಿಕ ನಾಟಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಗೊರೂರು ಜಾತ್ರಾ ವೈಭವ ಸಮಿತಿ ಅಧ್ಯಕ್ಷ ಜಗದೀಶ್ ರಾಮಘಟ್ಟ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಯೋಗಾನರಸಿಂಹ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ, ಜಿಲ್ಲಾ ಕನ್ನಡ ರಂಗಭೂಮಿ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಿಲ್ಲೆಯ ಆಯ್ದ ಕಲಾವಿದರಿಂದ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಜ. 24ರ ಶನಿವಾರ ಬೆಳಿಗ್ಗೆ 11 ರಿಂದ ಸಂಜೆ 6ರ ವರೆಗೆ, ಜ. 25ರ ಭಾನುವಾರ ಬೆಳಿಗ್ಗೆ 11 ಹಾಗೂ ಸಂಜೆ 7 ಗಂಟೆಗೆ ಮತ್ತು ಜ. 26ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಗೊರೂರಿನ ಬಯಲು ರಂಗ ಮಂದಿರ ಸಂತೆ ಮೈದಾನದಲ್ಲಿ ನಾಟಕ ಪ್ರದರ್ಶನ ಕಾಣಲಿದೆ. ಕುರುಕ್ಷೇತ್ರ, ಧರ್ಮರಾಜ್ಯ ಸ್ಥಾಪನೆ ಹೀಗೆ ವಿವಿಧ ನಾಟಕಗಳು ಪ್ರದರ್ಶನ ಕಾಣಲಿವೆ ಎಂದು ಮಾಹಿತಿ ನೀಡಿದರು.

ಗೊರೂರು ಜಾತ್ರಾ ವೈಭವ ಸಮಿತಿ ಗೌರವಾಧ್ಯಕ್ಷ ಜಿ.ಆರ್.ಹೇಮರಾಜು, ಕಾರ್ಯಾಧ್ಯಕ್ಷ ಬಂಗಾರಿ ಗೌಡ, ಲಿಂಗರಾಜು, ಪ್ರಕಾಶ್ ಇದ್ದರು.

## ಹಳೇಬೀಡು ಕೆನರಾ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ರೈತರ ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಸಾಲ ಮರುಪಾವತಿ ಮಾಡಿದ ರೈತರಿಗೆ ಜಮೀನು ಆಧಾರ ಖುಲಾಸೆ ಮಾಡಿಕೊಡದೆ ಹಳೇಬೀಡು ಕೆನರಾ ಬ್ಯಾಂಕ್ ವ್ಯವಸ್ಥಾಪಕ ಸತಾಯಿಸುತ್ತಿದ್ದಾರೆ ಎಂದು ರೈತ ಮುಖಂಡರು ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಬ್ಯಾಂಕ್‌ಗೆ ಭೇಟಿ ನೀಡಿದ್ದ ರೈತ ಮುಖಂಡರು ಶಾಖಾ ವ್ಯವಸ್ಥಾಪಕ ಪ್ರೋನೋಜಿಕ್ ಸರ್ಕಾರ್ ವಿರುದ್ಧ ಧಿಕ್ಕಾರ ಕೂಗಿದರು. ಹೊರ ರಾಜ್ಯದಿಂದ ಬಂದಿರುವ ವ್ಯವಸ್ಥಾಪಕರಿಗೆ ಕನ್ನಡ ಭಾಷಾ ಜ್ಞಾನ ಇಲ್ಲ. ರೈತರಿಗೆ ಇಂಗ್ಲಿಷ್, ಹಿಂದಿ ಗೊತ್ತಿಲ್ಲ. ಹೀಗಾಗಿ ರೈತರು ಹಾಗು ವ್ಯವಸ್ಥಾಪಕರು ಒಬ್ಬರಿಗೊಬ್ಬರು ಸಮಸ್ಯೆ ಅರ್ಥ ಮಾಡಿಕೊಳ್ಳುವುದು ಕಷ್ಟವಾಯಿತು.

ಕನ್ನಡ, ಇಂಗ್ಲಿಷ್ ಭಾಷೆ ಗೊತ್ತಿರುವ ಸಿಬ್ಬಂದಿ ಎರಡೂ ಕಡೆಯ ಸಮಸ್ಯೆಯನ್ನು ಅರ್ಥ ಮಾಡಿಸುವ ಪ್ರಯತ್ನ ನಡೆಸಿದರು. ಆಧಾರ ಖುಲಾಸೆ ಮಾಡಿಸಲು ಉಪ ನೋಂದಣಾಧಿಕಾರಿ ಕಚೇರಿಗೆ ಶಾಖಾ ವ್ಯವಸ್ಥಾಪಕರ ಆಧಾರ್ ಕಾರ್ಡ್ ಕೊಡಬೇಕು. ನಂತರ ವ್ಯವಸ್ಥಾಪಕರ ಫೋನ್‌ಗೆ ಬರುವ ಒಟಿಪಿ ದೃಢೀಕರಿಸಬೇಕು. ವ್ಯವಸ್ಥಾಪಕರ ಆಧಾರ್ ಕಾರ್ಡ್ ಪಡೆದು ತಂದು ಕೊಡಿ ಎಂದು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಕೇಳುತ್ತಿದ್ದಾರೆ.



ಆದರೆ, ವ್ಯವಸ್ಥಾಪಕರು ಆಧಾರ್ ಕಾರ್ಡ್ ಕೊಡುತ್ತಿಲ್ಲ. ಬೇರೆ ವ್ಯವಸ್ಥೆಯಲ್ಲಿಯೂ ಆಧಾರ ಖುಲಾಸೆ ಮಾಡಿಕೊಡುತ್ತಿಲ್ಲ. ಉಡಾಫೆ ಉತ್ತರ ಕೊಡುತ್ತಿದ್ದಾರೆಂದು ರೈತ ಸಂಘದವರು ದೂರಿದರು.

ಸಾಲದ ಅಗತ್ಯವಿದೆ ಯಾವುದಾದರೂ ಬ್ಯಾಂಕ್ ಶಾಖೆಯಲ್ಲಿ ಸಾಲ ನವೀಕರಣ ಮಾಡಿಕೊಳ್ಳುತ್ತೇವೆಂದು ರೈತರು ಪರಿಪರಿಯಾಗಿ ಬೇಡಿಕೊಂಡರೂ, ಆಧಾರ ಖುಲಾಸೆ ಮಾಡಿಕೊಡುವುದಕ್ಕೆ ಶಾಖಾ ವ್ಯವಸ್ಥಾಪಕ ಪ್ರೋನೋಜಿಕ್ ಸರ್ಕಾರ್ ಮನಸ್ಸು ಮಾಡುತ್ತಿಲ್ಲ. ಉತ್ತರ ಕೊಡದೆ ತಮ್ಮ ಕೊಠಡಿಯಿಂದ ವ್ಯವಸ್ಥಾಪಕರು ಹೊರ ಹೊದರು. ಅದರಿಂದ ರೈತರ ಕೋಪ ನೆತ್ತಿಗೆರಿತು. ರೈತರು ಗಟ್ಟಿಧ್ವನಿಯಲ್ಲಿ ಮಾತನಾಡಿದರು. ಶೀಘ್ರದಲ್ಲಿಯೇ ಆಧಾರ ಖುಲಾಸೆ ಮಾಡಿಕೊಡದಿದ್ದರೆ ಪ್ರತಿಭಟನೆ ನಡೆಸುತ್ತೇವೆಂದು ಎಚ್ಚರಿಸಿದರು.

ವ್ಯವಸ್ಥಾಪಕರು ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಹಿನ್ನೆಲೆಯಲ್ಲಿ ಹಾಸನದ ವಿಭಾಗೀಯ ವ್ಯವಸ್ಥಾಪಕಿ ನಿರಜಾ ಅವರಿಗೆ ರೈತ ಸಂಘದವರು ಕೆರೆ ಮಾಡಿ ಸಮಸ್ಯೆ ಹೇಳಿಕೊಂಡರು.

ಗ್ರಾಮೀಣ ಶಾಖೆಗೆ ಕನ್ನಡ ಬಲ್ಲವರನ್ನು ಹಾಕಿಕೊಡಿ, ರೈತರಿಗೆ ಉಡಾಫೆ ಉತ್ತರ ಕೊಡುವ ಶಾಖಾ ವ್ಯವಸ್ಥಾಪಕರನ್ನು ಬದಲಾಯಿಸಿಕೊಡಿ ಎಂದು ರೈತರು ಕೇಳಿಕೊಂಡರು. ನನಗೆ ಅಂಗವೈಕಲ್ಯ ಇದೆ.

ಕುಂಟುತ್ತಾ ಬ್ಯಾಂಕಿಗೆ ಅಲೆದಾಡುವುದು ಕಷ್ಟವಾಗುತ್ತಿದೆ ಎಂದರೂ ಶಾಖಾ ವ್ಯವಸ್ಥಾಪಕರು ಸ್ಪಂದಿಸುತ್ತಿಲ್ಲವೆಂದು ರೈತ ಈಶ್ವರಪ್ಪ ದೂರಿದರು.

ಸಾಲ ಮರುಪಾವತಿ ಮಾಡಿದ ರೈತರ ಜಮೀನು ಆಧಾರ ಖುಲಾಸೆ ಮಾಡಿಕೊಡುವುದು ನಮ್ಮ ಕರ್ತವ್ಯ. ಕಾನೂನು ಪರಿಮಿತಿಯಲ್ಲಿ ಕೆಲಸ ಮಾಡುವುದರಿಂದ ತೊಂದರೆ ಆಗಿರಬಹುದು.

ಶಾಖಾ ವ್ಯವಸ್ಥಾಪಕರೊಂದಿಗೆ ಮಾತನಾಡಿ ಆಧಾರ ಖುಲಾಸೆ ಮಾಡಿಕೊಡುತ್ತೇವೆ. ಕನ್ನಡ ಭಾಷೆ ಗೊತ್ತಿರುವ ಶಾಖಾ ವ್ಯವಸ್ಥಾಪಕರನ್ನು ವರ್ಗಾಹಿಸುವ ಕುರಿತು ಪರಿಶೀಲನೆ ನಡೆಸುತ್ತೇವೆಂದು ವಿಭಾಗೀಯ ವ್ಯವಸ್ಥಾಪಕಿ ನಿರಜಾ ಹೇಳಿದರು.

ರೈತ ಸಂಘ ಪದಾಧಿಕಾರಿಗಳಾದ ಎಲ್.ಈ.ಶಿವಪ್ಪ, ಗಂಗಾಧರಪ್ಪ, ಜಿ.ಎಸ್.ಶಿವಕುಮಾರ್, ಶೇಖರಪ್ಪ, ಮುನ್ನಾಭಾಯಿ, ರಾಜು, ಸೊಪ್ಪಿನಹಳ್ಳಿ ಹುಲೀಗೌಡ, ತಟ್ಟೆಹಳ್ಳಿ ಈಶ್ವರಪ್ಪ, ಕುಮಾರ ಹಾಜರಿದ್ದರು.

## ಜ. 26ರಂದು ಅರೇಹಳ್ಳಿಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭೀಮಾ ಕೋರೆಗಾಂವ್ ವಿಜಯೋತ್ಸವ ಅಂಗವಾಗಿ ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ ಜ. 26ರ ಸೋಮವಾರ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಹಾಗೂ ವಿಜಯ ಸ್ಥಂಭದ ಬೃಹತ್ ಮೆರವಣಿಗೆ ಏರ್ಪಡಿಸಲಾಗಿದೆಯೆಂದು ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣಾ ಸಮಿತಿ ಅರೇಹಳ್ಳಿ ಘಟಕದ ಅಧ್ಯಕ್ಷ ವಿರೂಪಾಕ್ಷ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, 1818ರ ಜ.1ರಂದು ನಡೆದ ಅಸ್ಪೃಶ್ಯರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ದೇಶಾದ್ಯಂತ ವಿಜಯದ ದಿನವಾಗಿ ಆಚರಿಸಲಾಗುತ್ತದೆ. 500 ಮಹಾರ್ ಸೈನಿಕರು 28,000 ಪೇಶ್ವೆ ಸೈನಿಕರನ್ನು ಸೋಲಿಸಿದ್ದು ಐತಿಹಾಸಿಕ ದಾಖಲೆ. ಈ ಸಂಭ್ರಮಾಚರಣೆಗಾಗಿ ಅರೇಹಳ್ಳಿಯಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಪಟ್ಟಣದ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಅಂಬೇಡ್ಕರ್ ವೃತ್ತ ಮಾರ್ಗವಾಗಿ ಡಿ.ಜೆ. ಮತ್ತು ನಾಸಿಕ್ ಡೋಲು ವಾದ್ಯದೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಗುವುದು. ಸಂಜೆ 6 ಗಂಟೆಗೆ ಅಂಬೇಡ್ಕರ್ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ದಲಿತ ಮುಖಂಡರಾದ ಶ್ರೀಧರ ಕಲಿವೀರ್ ಹಾಗೂ ಕೆ.ಎಂ.ಸಂದೇಶ್ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ನಾಲ್ಕು ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಯುವಕರಿಗೆ ಸಂವಿಧಾನದ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣಾ ಸಮಿತಿ ಉಪಾಧ್ಯಕ್ಷರಾದ ಮಲ್ಲಿಕಾರ್ಜುನ, ಕುಮಾರ್, ಖಜಾಂಚಿ ಸೋಮಶೇಖರ್, ಕಾರ್ಯದರ್ಶಿ ದಿನೇಶ್ ಇದ್ದರು.

## ಕಾರು ಡಿಕ್ಕಿ: ಪಿಯುಸಿ ವಿದ್ಯಾರ್ಥಿ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕಾರು ಡಿಕ್ಕಿಯಾಗಿ ಕಾಲೇಜು ವಿದ್ಯಾರ್ಥಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಾಳೆಕೊಪ್ಪಲು ಬಳಿ ಗುರುವಾರ ನಡೆದಿದೆ.

ತಾಲ್ಲೂಕಿನ ಹೊನ್ನೆಶೆಟ್ಟಿಹಳ್ಳಿ ಗ್ರಾಮದ ಸಂಜು (17) ಮೃತ ದುರ್ದೈವಿ. ಪಟ್ಟಣದ ಕ್ರೈಸ್ತ ದಿ ಕಿಂಗ್ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಸಂಜು ತನ್ನ ಅಜ್ಜಿಯ ಮನೆಯಿಂದ ಸೈಕಲ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಚನ್ನರಾಯಪಟ್ಟಣದ ಹಾಸ್ಟೆಲ್‌ನಲ್ಲಿ ಉಳಿದುಕೊಂಡು ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಅಜ್ಜಿಯ ಯೋಗಕ್ಷೇಮ ವಿಚಾರಿಸಲು ಸೈಕಲ್‌ನಲ್ಲಿ ತೆರಳಿದ್ದ. ಗುರುವಾರ ಎಂದಿನಂತೆ ಕಾಲೇಜಿಗೆ ಬರುವಾಗ ಅವಘಡ ಸಂಭವಿಸಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಫಲಪ್ರದವಾಗಲಿಲ್ಲ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೀವನದ ಗೆಲುವು

ತನ್ನ ತಾನು ಅರಿಯುವುದೇ ಜೀವನದ
ಗೆಲುವು
ವೃತ್ತಿ ನಿಷ್ಠೆಯೇ ಅದು ನಿನ್ನ ಜೀವನದ
ಗೆಲುವು
ಪರರ ಚಿಂತೆಯನ್ನು ಬಿಟ್ಟು ನೀ ಬದುಕೋ
ಮನುಜ ಅದೇ ನಿನ್ನ ಜೀವನದ ಗೆಲುವು
ತಂದೆ ತಾಯಿಯನ್ನು ಪೂಜಿಸು ಅದೇ
ನಿನ್ನ ಜೀವನದ ಶ್ರೇಷ್ಠ ಗೆಲುವು



**- ಸಂಜಯ್ ಕುಮಾರ್**
**ಗುಡ್ ಸಿಟಿಜನ್ ಕಾಲೇಜು, ಹಾಸನ**

## ಜ.25ಕ್ಕೆ ಶ್ರವಣಬೆಳಗೊಳದಲ್ಲಿ ಹಿಂದು ಸಮಾಜೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಿಂದು ಸಮಾಜೋತ್ಸವ ಸಮಿತಿ ವತಿಯಿಂದ ಜ. 25ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಶ್ರವಣಬೆಳಗೊಳದ ಬಾಹುಬಲಿ ಪಾಲಿಟೆಕ್ನಿಕ್ ಆವರಣದಲ್ಲಿ ಹಿಂದು ಸಮಾಜೋತ್ಸವ ನೆರವೇರಲಿದೆ ಎಂದು ಧರ್ಮ ಜಾಗರಣ ಸಮಿತಿ ಜಿಲ್ಲಾ ಸಂಯೋಜಕ ಹೆಚ್.ಸಿ.ಕೃಷ್ಣಮೂರ್ತಿ ಹೊಸಹಳ್ಳಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಅಂದು ಬೆಳಿಗ್ಗೆ 9.30ಕ್ಕೆ ಶ್ರವಣಬೆಳಗೊಳದ ನಾಗಯ್ಯನ ಕೊಪ್ಪಲು ವೃತ್ತದಿಂದ ಪಾಲಿಟೆಕ್ನಿಕ್ ವರೆಗೆ ಶೋಭಾಯಾತ್ರೆ ನಡೆಯಲಿದೆ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ.ಮೋಹನಕುಮಾರಿ ಮತ್ತು ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಶ್ರೀ ಚಂದ್ರಶೇಖರ ಗುರೂಜಿ ಭಾಗವಹಿಸುವರು. ವಿಶ್ವ ಹಿಂದು ಪರಿಷತ್ ಪ್ರಾಂತ ಕಾರ್ಯದರ್ಶಿ ಶರತ್ ಪಂಪ್ವೆಲ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ತಾಲೂಕು ಹಿಂದು ಸಮಾಜೋತ್ಸವ ಸಮಿತಿ ಉಪಾಧ್ಯಕ್ಷ ಹೆಚ್.ಎನ್.ಲೋಕೇಶ್ ಹಡೇನಹಳ್ಳಿ ಮಾತನಾಡಿ, ಹಿಂದುಗಳೆಲ್ಲ ಒಗ್ಗೂಡಿದರೆ ದೇಶದಲ್ಲಿ ಹಿಂದೂ ಸಂಸ್ಕೃತಿ ಹಾಗೂ ಧರ್ಮ ಬಲಿಷ್ಠಗೊಂಡು, ಸುಭದ್ರ ರಾಷ್ಟ್ರ ನಿರ್ಮಾಣ ಮಾಡುವ ಉದ್ದೇಶದಿಂದ ಹಾಗೂ ದೇಶದಲ್ಲಿ ನಡೆಯುತ್ತಿರುವ ಹಿಂದುಗಳ ಮೇಲಿನ ದೌರ್ಜನ್ಯಕ್ಕೆ ನಾವೆಲ್ಲರೂ ಒಗ್ಗೂಡಿದರೆ ಮಾತ್ರ ಪರಿಹಾರ ದೊರೆಯಲಿದೆ. ನಮ್ಮ ದೇಶದಲ್ಲಿ ಬಹು ಪಾಲು ಜನರಿಗೆ ದೇಶ ಮತ್ತು ಧರ್ಮದ ಬಗ್ಗೆ ಅಭಿಮಾನ ಇಲ್ಲದಿರುವುದೇ ಇಂದಿನ ಈ ಪರಿಸ್ಥಿತಿಗೆ ಕಾರಣವಾಗಿದ್ದು ಇದರ ಅರಿವು ಮೂಡಿಸುವ ಉದ್ದೇಶವೇ ಈ ಹಿಂದು ಸಮಾಜೋತ್ಸವದ ಮುಖ್ಯ ಉದ್ದೇಶವಾಗಿದೆ ಎಂದರು.

ಶ್ರವಣಬೆಳಗೊಳ ಹಿಂದು ಸಮಾಜೋತ್ಸವ ಸಮಿತಿ ಸದಸ್ಯ ಮನುಗೌಡ ಮಾತನಾಡಿದರು. ಹಿಂದು ಸಮಾಜೋತ್ಸವ ಸಮಿತಿ ಸದಸ್ಯರಾದ ನಾಗೇಶ್ ಹಿರಿಬಿಳ್ತಿ, ಎಸ್.ಜೆ.ಭಾಸ್ಕರಾಚಾರ್, ಸತೀಶ್ ಹೊಸಹಳ್ಳಿ ಇದ್ದರು.

## ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಭೂಮಿಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಮಳಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಠಸಾಗರ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆ ಹಾಗೂ ಕ್ಯಾನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಬುಗುಡಹಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಗುರುವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಆದ್ಯತೆಯ ಆಧಾರದ ಮೇಲೆ ವಿವಿಧೆಡೆ ರಸ್ತೆ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಮಳಲಿ ಗ್ರಾ.ಪಂ. ವ್ಯಾಪ್ತಿಯ ಮಠಸಾಗರದಿಂದ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಸಂಪರ್ಕಿಸುವ ರಸ್ತೆಯನ್ನು 20 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಕ್ಯಾನಹಳ್ಳಿ ಗ್ರಾ.ಪಂ.ನ ಬುಗುಡಹಳ್ಳಿ ಗ್ರಾಮದಲ್ಲಿ ಸಹ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 20 ಲಕ್ಷ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಅತ್ಯಲ್ಪ ಅನುದಾನದಲ್ಲಿ ಆದ್ಯತೆಯ ಮೇಲೆ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಪ್ರತಿ ಪಂಚಾಯಿತಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳುತ್ತೇನೆ. ಪ್ರತಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳ ಕುರಿತು ಖುದ್ದಾಗಿ ಅರಿವು ಹೊಂದಿ ಸಮಸ್ಯೆಗಳನ್ನು ಬಗೆಹರಿಸಲು ಆದ್ಯತೆ ನೀಡುವೆ. ಗುತ್ತಿಗೆದಾರರು ಗುಣಮಟ್ಟದ ರಸ್ತೆ ಮಾಡಬೇಕು ಹಾಗೂ ಜನರು ಸಹ ಕಾಮಗಾರಿಯ ಮೇಲೆ ನಿಗಾ ಇಡಬೇಕು ಎಂದು ಹೇಳಿದರು.

ಗ್ರಾಮಸ್ಥ ಪ್ರಸನ್ನ ಮಾತನಾಡಿ, ಬುಗಡಹಳ್ಳಿ ಗ್ರಾಮದಲ್ಲಿ ಹಲವು ದಶಕಗಳ ನಂತರ ರಸ್ತೆ ನಿರ್ಮಾಣವಾಗುತ್ತಿದೆ. ಹೀಗಾಗಿ ಗ್ರಾಮಸ್ಥರೆಲ್ಲಾ ಶಾಸಕರಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದರು. ಬಿಜೆಪಿ ಮುಖಂಡರಾದ ಬ್ಯಾಕರವಳ್ಳಿ ಜಯಣ್ಣ, ಕ್ಯಾನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಂಚಹಳ್ಳಿ ಮೋಹನ್, ಮಾಜಿ ಉಪಾಧ್ಯಕ್ಷೆ ರಾಧಮ್ಮ, ಪ್ರತಾಪ್, ಕ್ಯಾನಹಳ್ಳಿ ವಾಸು, ಅನಿಲ್, ತಿರುಮಲ ಹಾಗೂ ಇತರರಿದ್ದರು.

# ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಸ್ವಾಮಿ ತೋಟಕ್ಕೆ ಕೃಷಿಕರ ದಂಡು

## ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಪದಾಧಿಕಾರಿಗಳ ಭೇಟಿ | ಅರ್ಥಪೂರ್ಣ ಸಂವಾದ

ಅರಕಲಗೂಡು: ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ರಾಜ್ಯ ಪದಾಧಿಕಾರಿಗಳು ಹಾಗೂ ರಾಜ್ಯ ನಿರ್ದೇಶಕರ ತಂಡ ಮತ್ತು ರಾಜ್ಯದ ಪ್ರಗತಿಪರ ರೈತರು ತಾಲೂಕಿನ ಮಗ್ಗೆ ಮನೆ ಡಾ.ರಂಗಸ್ವಾಮಿ ಅವರ ತೋಟಕ್ಕೆ ಭೇಟಿ ನೀಡಿ ಸಂವಾದ ನಡೆಸಿದರು.



ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರೂ ಆಗಿರುವ ಸಮಗ್ರ ಕೃಷಿ ಪಂಡಿತ ಡಾ.ರಂಗಸ್ವಾಮಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದನ್ನು ಸ್ವಾಗತಿಸಿ ಮತ್ತು ಅವರ ಸಮಗ್ರ ಕೃಷಿಯನ್ನು ಕಣ್ಣಾರೆ ಕಂಡು ಅವರೊಂದಿಗೆ ಕೃಷಿ ಬದುಕು ಕುರಿತು ರಾಜ್ಯದ ಬೀದರ್‌ನಿಂದ ಚಾಮರಾಜ ನಗರದವರೆಗೂ ಎಲ್ಲಾ ಜಿಲ್ಲೆಗಳಿಂದ ತಲಾ ಇಬ್ಬರು ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ನಿರ್ದೇಶಕರು ಮತ್ತು ಪ್ರಗತಿಪರ ಕೃಷಿಕರನ್ನೊಳಗೊಂಡ ತಂಡ ರಂಗಸ್ವಾಮಿ ಅವರ ಮಗ್ಗೆ ಮನೆ ತೋಟ, ಡೇರಿ, ಮುದಗನೂರು ಸಮಗ್ರ ಕೃಷಿ ಪ್ರದೇಶ ಮತ್ತು ಸಾವಿರ ಹಸುಗಳೊಂದಿಗೆ ಆರಂಭಿಸಿರುವ ಬೃಹತ್ ತಾಂತ್ರಿಕ ಹೈನುಗಾರಿಕೆಯನ್ನು ನೇರವಾಗಿ ವೀಕ್ಷಣೆ ಮಾಡಿ ಪ್ರಶಂಸೆ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ರಾಜ್ಯ ಕಾರ್ಯಾಧ್ಯಕ್ಷ ನಗರ ಮಹಾದೇವಪ್ಪ ಮಾತನಾಡಿ, ಬಹುವರ್ಷಗಳ ಹಿಂದೆ ಪ್ರಗತಿಪರ ರೈತ ಪ್ರಫುಲ್ ಚಂದ್ರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತಿತ್ತು. ಹಲವು ವರ್ಷಗಳ ನಂತರ ಕೃಷಿ ಕ್ಷೇತ್ರಕ್ಕೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ನಮ್ಮ ಸಮಗ್ರ ಕೃಷಿ ಪಂಡಿರಾಗಿರುವ ದೊಡ್ಡಮಗ್ಗೆ ರಂಗಸ್ವಾಮಿ ಅವರಿಗ ಪ್ರಶಸ್ತಿ ಬಂದಾಗ ನಮಗೆ ಅಷ್ಟೇನೂ ತಿಳಿದಿರಲಿಲ್ಲ. ಈ ಸಂಬಂಧ ಹಾಸನದಲ್ಲಿ ರಾಜ್ಯ ಸಮಿತಿಯ ಕಾರ್ಯಕಾರಿ ಸಭೆಯಲ್ಲಿ ಚರ್ಚೆ ಮಾಡಿದ ವೇಳೆ ವಾಸ್ತವ ತಿಳಿಯಿತು. ಆ ಸಲುವಾಗಿ ಸಮಿತಿಯ 62 ಮಂದಿ ರಂಗಸ್ವಾಮಿ ಅವರ ತೋಟ, ಡೇರಿ, ಹೈನುಗಾರಿಕೆ, ಡೇರಿಗೆ ಭೇಟಿ ನೀಡಿದಾಗ ಸಂಪೂರ್ಣವಾಗಿ ಅರಿವಾಯಿತು. ರಂಗಸ್ವಾಮಿ ಅವರಿಗೆ ಡಾಕ್ಟರೇಟ್ ಮತ್ತು ರಾಜ್ಯೋತ್ಸವ ಪ್ರಶಸ್ತಿ ಬಂದಿರುವ ಬಗ್ಗೆ ಇಲ್ಲಿ ನಮ್ಮ ತಂಡ ಅಧ್ಯಯನ ಮಾಡಿದ ವೇಳೆ ತಿಳಿಯಿತು. ರಂಗಸ್ವಾಮಿ ಅವರ ಸಮಗ್ರ ಕೃಷಿ ಬದುಕು, ಅನುಭವ ಮತ್ತು ತಾಂತ್ರಿಕತೆಯು ಇಡೀ ಕೃಷಿ, ಹೈನುಗಾರಿಕೆ, ತೋಟಗಾರಿಕೆಯ ಕ್ಷೇತ್ರವೂ ಒಂದು ದೊಡ್ಡ ಕೃಷಿ, ಮರ ಕೃಷಿ ವಿಶ್ವವಿದ್ಯಾಲಯದಂತೆ ಭಾಸವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಸಂಪೂರ್ಣವಾಗಿ ಆಧುನಿಕ ತಂತ್ರಜ್ಞಾನವನ್ನು ರಂಗಸ್ವಾಮಿ ಅವರು ಅಳವಡಿಸಿಕೊಂಡಿದ್ದಾರೆ. ಇದರಿಂದ ಅವರು ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚು ಆಧಾಯ, ಪರಿಸರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎನ್ನಬಹುದು. ಬದುಕು ಕಟ್ಟಿಕೊಳ್ಳೊಕ್ಕೆ ಒಂದೇ ಬೆಳೆಯಿಂದ ಸಾಧ್ಯವಿಲ್ಲ ಎಂಬುದು ರಂಗಸ್ವಾಮಿ ಅವರು ತೋರಿಸಿದ್ದಾರೆ. ಅರಣ್ಯ ಇಲಾಕೆ ಮಾಡದ ಸಾಧನೆಯನ್ನು ಇವರು ಸಾವಿರಾರು ಸಂಖ್ಯೆಯ ಶ್ರೀಗಂಧ, ರಕ್ಷ ಚಂದನ ಹಾಗೂ ಇತರೆ ಮರಕೃಷಿಯನ್ನು ಕೈಗೊಂಡಿದ್ದಾರೆ. ಅಡಿಕೆ, ತೆಂಗು, ಕಾಫಿ, ಏಲಕ್ಕಿ, ಕಾಳುಮೆಣಸು, ವಿವಿಧ ಬಗೆಯ ಹಣ್ಣಿನ ಗಿಡ ಮರಗಳು, ಐದು ಕೆರೆಗಳಲ್ಲಿ ಮೀನು ಸಾಗಾಣಿಕೆಯನ್ನು ಕೈಗೊಂಡಿರುವುದು ಅತ್ಯಂತ ವಿಶೇಷವಾಗಿದೆ. ರಾಜ್ಯ ಸರ್ಕಾರ ಕೃಷಿ ಕ್ಷೇತ್ರಕ್ಕೆ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕೃಷಿ ವಿವಿ ಕೂಡ ರಂಗ ಸ್ವಾಮಣ್ಣ ಅವರಿಗೆ ಡಾಕ್ಟರೇಟ್ ಪ್ರಶಸ್ತಿ ಪ್ರದಾನ ಮಾಡಿರುವುದು ರೈತರನ್ನು ಮತ್ತಷ್ಟು ಕೃಷಿಯಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಉತ್ತೇಜಿಸಿದಂತಾಗಿದೆ ಎಂದು ಅವರು ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ನಿಕಟಪೂರ್ವ ಅಧ್ಯಕ್ಷ ಮಂಜುನಾಥಗೌಡ ಮಾತನಾಡಿ, ದೊಡ್ಡಮಗ್ಗೆ ರಂಗಸ್ವಾಮಿ ಅವರ ಸಮಗ್ರ ಕೃಷಿಯ ಬದುಕು ಇಡೀ ರಾಜ್ಯದ ರೈತರು ಮಾರ್ಗದರ್ಶನವಾಗಿದೆ. ಒಮ್ಮೆ ಇಲ್ಲಿಗೆ ನಮ್ಮ ರೈತರು ಭೇಟಿನೀಡಿ ಕೃಷಿಯನ್ನು ನೋಡಿದರೇ ಸಾಕು ತಕ್ಷಣದಲ್ಲಿಯೇ ಪರಿವರ್ತನೆ ಬೀರಲಿದೆ. ಕೃಷಿ ರೈತ ವಿಜ್ಞಾನಿಯಾಗಿರುವ ರಂಗಸ್ವಾಮಣ್ಣ ಅವರನ್ನು ನೇರವಾಗಿ ಭೇಟಿಯಾಗಿ ಅವರ ಅನುಭವವನ್ನು ಹಂಚಿಕೊಳ್ಳಬೇಕಿದೆ. ಈಗ ತಾನೆ ಆರಂಭಿಸಿರುವ ಡೇರಿಯ ಉತ್ಪನ್ನಗಳು ತುಂಬಾ ಗುಣಮಟ್ಟದಿಂದ ಕೂಡಿವೆ. ನಮ್ಮ ಸರ್ಕಾರಿ ಸ್ವಾಮ್ಯದ ಏಜೆನ್ಸಿಗಳು ಇಲ್ಲಿ ದೊರೆಯುವ ಡೈರಿ ಉತ್ಪನ್ನಗಳಿಗೆ ಸಮನಾಗಿ ಗುಣಮಟ್ಟವನ್ನು ಕೊಡಲಾರವು ಎಂಬುದು ನನ್ನ ನಂಬಿಕೆಯಾಗಿದೆ ಎಂದರು.

ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಡಾ.ರಂಗಸ್ವಾಮಿ ಮಾತನಾಡಿ, ಇಡೀ ರಾಜ್ಯದ ಕೃಷಿಕ ಸಮಾಜದ ನಿರ್ದೇಶಕರು, ಅಧಿಕಾರಿಗಳು ನನ್ನ ತೋಟಕ್ಕೆ ಭೇಟಿ ನೀಡಿ ನನ್ನ ಸಮಗ್ರ ಕೃಷಿ ಬದುಕು ಕುರಿತು ಸಂವಾದ ನಡೆಸಿರುವುದು ನನ್ನ ಜೀವನದ ಅತ್ಯಮೂಲ್ಯ ಕ್ಷಣವಾಗಿದೆ ಎಂದು ಭಾವಿಸುತ್ತೇನೆ. ನಾನು ಕೈಗೊಂಡಿರುವುದು ಸಮಗ್ರ ಕೃಷಿ ಇದನ್ನು ನಾನು ಸೇರಿದಂತೆ ಇಡೀ ಕುಟುಂಬ ಕೃಷಿಯಲ್ಲಿ ತೊಡಗಿಕೊಂಡಿರುವುದೇ ಭೂಮಿ ತಾಯಿ. ಪರಿಸರ ನಮ್ಮ ದೊಡ್ಡ ಮಟ್ಟದಲ್ಲಿ ಕೈಹಿಡಿದು ನಡೆಸುತ್ತಿದೆ. ಉತ್ತಮ ಗುಣಮಟ್ಟದ ಹೈನುಗಾರಿಕೆ, ಉತ್ಪನ್ನಗಳನ್ನು ಮಾಡಿ ಮಾರುಕಟ್ಟೆಗೆ ಬಿಟ್ಟಿದ್ದೇವೆ. ಸಮಾಜಕ್ಕೆ ಒಳ್ಳೆಯ ಉತ್ಪನ್ನಗಳನ್ನು ನೀಡುವ ಬದ್ಧತೆಯನ್ನು ಪ್ರಮುಖವಾಗಿ ಕೈಗೊಂಡಿದ್ದೇವೆ. ನಾವು ಕೃಷಿಯನ್ನು ತಾಂತ್ರಿಕವಾಗಿ ಕೈಗೊಂಡಿದ್ದೇವೆ. ಅಲ್ಲದೆ ಇಷ್ಟಪಟ್ಟು ಖುಷಿಯಿಂದ ಮಾಡುತ್ತಿದ್ದೇವೆ. ಯಾರೇ ರೈತರು, ವಿದ್ಯಾರ್ಥಿಗಳು, ಕೃಷಿ ಆಸಕ್ತರು ಇಲ್ಲಿಗೆ ಭೇಟಿ ನೀಡಿ ನಮ್ಮ ಸಲಹೆಯನ್ನು ಪಡೆಯಬಹುದಾಗಿದೆ ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಡಾ.ರಾಮೇಗೌಡ, ಕೃಷ್ಣೇಗೌಡ, ಶಿರೀನ್ ರಂಗಸ್ವಾಮಿ ಹಾಗೂ ಇತರರಿದ್ದರು.

# ಧರ್ಮಸ್ಥಳ ಯೋಜನೆಯಿಂದ ಮನೆ ಹಸ್ತಾಂತರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲ್ಲೂಕಿನ ಶಾಂತಿಗ್ರಾಮ ವಲಯದ ರಂಗನಾಥಪುರ ಗ್ರಾಮದ ಶಾಂತಮ್ಮ ಅವರಿಗೆ ಜ್ಞಾನ ವಿಕಾಸ ಕಾರ್ಯಕ್ರಮದಡಿ 1.35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ವಾತ್ಸಲ್ಯ ಮನೆಯನ್ನು ಹಸ್ತಾಂತರಿಸಲಾಯಿತು.

ಮೈಸೂರು ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕ ಜಯಂತ ಪೂಜಾರಿ, ಜಿಲ್ಲಾ ನಿರ್ದೇಶಕ ಸುರೇಶ ಮೊಯ್ಲಿ ಅವರು ವಾತ್ಸಲ್ಯ ಮನೆಯನ್ನು ಫಲಾನುಭವಿ ಶಾಂತಮ್ಮ ಅವರಿಗೆ ಹಸ್ತಾಂತರಿಸಿ, ಫಲಪುಷ್ಪ ನೀಡಿ ಗೌರವಿಸಿ ಶುಭ ಹಾರೈಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಈ ಸಹಾಯದಿಂದ ಶಾಂತಮ್ಮ ಅವರ ಕನಸಿನ ಮನೆ ನನಸಾಗಿದ್ದು, ಗ್ರಾಮಸ್ಥರು ಯೋಜನೆಯ ಕಾರ್ಯವನ್ನು ಪ್ರಶಂಸಿಸಿದರು.

ಜನಜಾಗೃತಿ ಸದಸ್ಯ ಸುರೇಶ ಗುರೂಜಿ, ತುಳಸಿರಾಮ್, ಬೊಮ್ಮೆಗೌಡ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅರುಣ್ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರ್ವತಮ್ಮ, ಒಕ್ಕೂಟ ಅಧ್ಯಕ್ಷೆ ಜಯಂತಿ, ಹಾಸನ್ ಕಾಫಿ ಕ್ಯೂರಿಂಗ್ ವ್ಯವಸ್ಥಾಪಕರಾದ ಚಂದ್ರು, ಯೋಜನಾಧಿಕಾರಿ ಹೇಮಲತಾ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಹಂಸಲೇಖ, ಸೇವಾ ಪ್ರತಿನಿಧಿ ಮಮತಾ ಉಪಸ್ಥಿತರಿದ್ದರು.

# ರಸ್ತೆ ಅಪಘಾತದಲ್ಲಿ ಹಾಸನ ನಾಲ್ಕನೇ ಸ್ಥಾನದಲ್ಲಿದೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಪಘಾತದಲ್ಲಿ ರಾಜ್ಯಕ್ಕೆ ಜಿಲ್ಲೆ ನಾಲ್ಕನೇ ಸ್ಥಾನದಲ್ಲಿದೆ, ಅಪಘಾತ ತಡೆಯಲು ರಸ್ತೆ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುವ ಮೂಲಕ ಜೀವನ ಸುರಕ್ಷತೆಯ ಜೊತೆಯಲ್ಲಿ ಸಂಚಾರ ಮಾಡಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ತಿಳಿಸಿದರು.




ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಪ್ರಾದೇಶಿಕ ಸಾರಿಗೆ ಕಚೇರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚಾರ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿಯಿಂದ ಹೇಮಾವತಿ ಪ್ರತಿಮೆಯವರೆಗೆ ಆಯೋಜಿಸಲಾಗಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಲ್ಲಿ ಜನವರಿ ತಿಂಗಳ ಅಂತ್ಯದವರೆಗೆ ರಸ್ತೆ ಸುರಕ್ಷತೆ ಮಾಸಾಚರಣೆಯನ್ನು ಹಮ್ಮಿಕೊಂಡಿದ್ದು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ರಸ್ತೆ ಸುರಕ್ಷತೆಯ ಅರಿವು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ರಸ್ತೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ವಾಹನ ಚಾಲಕರ ಜೀವದ ಜೊತೆಗೆ ಪಾದಚಾರಿಗಳ ಜೀವ ಹಾಗೂ ಅವಲಂಬಿತರ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಸಂಚಾರಿ ನಿಯಮದ ಜೊತೆಗೆ ಎಚ್ಚರಿಕೆಯಿಂದ ವಾಹನಗಳನ್ನು ಚಲಾಯಿಸಬೇಕು ಎಂದರು.

ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಸಂಚಾರವಿಲ್ಲದ ಜೀವನ ಸಾಗುವುದಿಲ್ಲ ರಸ್ತೆ ಸಂಚಾರದ ಜೊತೆಗೆ ಜೀವನದ ಸುರಕ್ಷತೆಯ ದೃಷ್ಟಿಯಿಂದ ಹೆಲ್ಮೆಟ್ ಧರಿಸಿ ಹಾಗೂ ಸೀಟ್ ಬೆಲ್ಟ್ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.


ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮಾತನಾಡಿ, ಹಾಸನವನ್ನು ಅಪಘಾತ ಮುಕ್ತ ಜಿಲ್ಲೆಯಾಗಿ ಮಾಡಲು ಎಲ್ಲರ ಸಹಕಾರ ಅಗತ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚು ರಸ್ತೆ ಅಪಘಾತಕ್ಕೆ ಒಳಗಾಗುತ್ತಿದ್ದು ಅಪಘಾತಗಳ ಸಂಖ್ಯೆ ಸಹ ಹೆಚ್ಚಾಗುತ್ತಿದೆ, ಅಪಘಾತವಾಗಿ ಮರಣ ಹೊಂದಿದವರಿಗಿಂತ ಗಾಯಗೊಂಡು ಇನ್ನೊಬ್ಬರ ಮೇಲೆ ಅವಲಂಬಿತವಾಗುವುದು ಹೆಚ್ಚುಗುತ್ತಿದೆ ಎಂದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಹಾಗೂ ಇತರರು ಉಪಸ್ಥಿತರಿದ್ದರು.

# ಅಂಬಿಗರ ಚೌಡಯ್ಯ ಶ್ರೇಷ್ಠ ವಚನಕಾರ: ಜಿಲ್ಲಾಧಿಕಾರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಂಬಿಗರ ಚೌಡಯ್ಯನವರ ವಚನದ ಭಾಷೆ, ಶೈಲಿ ಗಮನಿಸಿದರೆ ಅವರೊಬ್ಬ ಕೆಚ್ಚೆದೆಯ, ಶ್ರೇಷ್ಠ ನಿಷ್ಠುರ ವಚನಕಾರರಾಗಿದ್ದರೆಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.



ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಅಂಬಿಗರ ಚೌಡಯ್ಯ ಜಯಂತಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, ಅಂಬಿಗರ ಚೌಡಯ್ಯ ವಚನ ಪರಂಪರೆಯಲ್ಲಿ ತಮ್ಮದೇಯಾದ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದರು. ಸಮಾಜದ ಅಂಕುಡೊಂಕುಗಳನ್ನು ಖಂಡಿಸಿ, ವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಶರಣರ ಪರಂಪರೆ ಮಹತ್ವವಾದುದು. ಅವರ ವಚನಗಳಲ್ಲಿ ಸಮಾಜದ ನಿಂದನೆಗಳು ನಿಷ್ಠುರವಾಗಿ ಕಂಡುಬಂದಿದೆ ಎಂದರು.

ತುಂಬಿದ ಹೊಳೆಯಲು ಹುಟ್ಟಾಕುವ ಅಂಬಿಗಷ್ಟೇ ಅಲ್ಲ ಬಹುಸಾಗರವನ್ನು ಹುಟ್ಟುಹಾಕುವ ಕೌಶಲ್ಯ ಇದೆ ಎಂದು ಅಂಬಿಗರ ಚೌಡಯ್ಯನವರು ಶಿವಶರಣರ ಸಂದೇಶವನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಎಂದು ತಿಳಿಸಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಕಚೇರಿ ಸಹಾಕಯ ರಮೇಶ್ ಅವರು, ಭಕ್ತಿ ಭಂಡಾರಿ ಬಸವಣ್ಣ ಅವರ ಸಮಕಾಲೀನರಾಗಿದ್ದ ಅಂಬಿಗರ ಚೌಡಯ್ಯ ವಚನ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಮಾನತೆ, ಮೂಢನಂಬಿಕೆ ಹಾಗು ಶಿಕ್ಷಣಕ್ಕಾಗಿ ಶ್ರಮಿಸಿದ್ದಾರೆ ಎಂದರು.

800 ವರ್ಷಗಳ ಹಿಂದೆ ಸಮಾಜ ಸುಧಾರಣೆಗಾಗಿ ಒತ್ತು ನೀಡಿದ್ದಾರೆ. ಮೂಢನಂಬಿಕೆ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಅವರಿಗೆ ಗೌರವ ಸಲ್ಲಿಸಬೇಕೆಂದರೆ ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು ಎಂದರು.

ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ಯೋಗೇಶ್ ಅಗ್ರಹಾರ ಮಾತನಾಡಿ, ಅಂಬಿಗರ ಚೌಡಯ್ಯ ಅವರು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ, ಹರಳಯ್ಯ ಅವರ ಸಮಕಾಲಿನರಾಗಿದ್ದು, ವಚನದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆಂದರು.

ಸತ್ಯವೆಂಬ ದೋಣಿಗೆ ಅರಿವು ಎಂಬ ಹುಟ್ಟು ಬಳಸಿ ಮುಕ್ತಿ ಎಂಬ ಬಾಳ ಪಯಣದ ಮುಟ್ಟಿಸುವರಾಗಿದ್ದರು. ಅಂಬಿಗ ಚೌಡಯ್ಯನವರು ಸತ್ಯ, ಪ್ರಾಮಾಣಿಕತೆ, ನೇರ ನುಡಿ ಮೂಲಕ 330 ವಚನಗಳನ್ನು ರಚಿಸಿದ್ದಾರೆಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ.ತಾರನಾಥ್, ನಿವೃತ್ತ ಮೀನುಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ನಾಗರಾಜ್, ಜಿಲ್ಲಾ ಬೆಸ್ತರ ಸಂಘದ ಸಂಘಟನಾ ಕಾರ್ಯದರ್ಶಿ ನಾಗರಾಜ್, ಮೀನುಗಾರರ ಸಂಘದ ಉಪಾಧ್ಯಕ್ಷ ವಜ್ರಮುಡಿ ಮತ್ತಿತರರಿದ್ದರು.

# ಬೈಕ್ ಡಿಕ್ಕಿಯಾಗಿ ವೃದ್ಧ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಬೈಕ್ ಸವಾರನ ನಿರ್ಲಕ್ಷ್ಯದ ಚಾಲನೆಯಿಂದ ರಸ್ತೆ ಬದಿ ನಿಂತಿದ್ದ ವೃದ್ಧ ಮೃತಪಟ್ಟಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 75ರ ಹೊನ್ನವಳ್ಳಿ ಸಮೀಪ ನಡೆದಿದೆ.

ಪಾಳ್ಯ ಹೋಬಳಿ ಹೆದ್ದುರ್ಗ ಗ್ರಾಮದ ಬಿ.ಬಿ.ಚನ್ನಬಸವೇಗೌಡ (85) ಮೃತರು. ಪಿಕ್ ಅಪ್ ವಾಹನದಲ್ಲಿ ಕಾಫಿ ಬೀಜದ ಮೂಟೆಗಳನ್ನು ತುಂಬಿಕೊಂಡು ಬರುತ್ತಿದ್ದಾಗ ಹೊನ್ನವಳ್ಳಿ ಸಮೀಪ ಕಾಫಿ ಮೂಟೆ ಕೆಳಕ್ಕೆ ಬಿದ್ದಿದೆ. ಅದನ್ನು ಪುನ: ವಾಹನಕ್ಕೆ ತುಂಬಿ ರಸ್ತೆ ಪಕ್ಕ ನಿಂತಿದ್ದಾಗ ಹಾಸನ ಕಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ವೃದ್ಧ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲ್ಲೇನಹಳ್ಳಿಯಲ್ಲಿ ದೇವಾಲಯ ಹುಂಡಿ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ದೇವಾಲಯ ಬೀಗ ಮುರಿದು ಹುಂಡಿ ಹಣ ಹಾಗೂ ಚಿನ್ನಾಭರಣ ಕದ್ದಿರುವ ಘಟನೆ ತಾಲೂಕಿನ ಮಲ್ಲೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀ ಲಕ್ಷ್ಮಿದೇವಿ ಹಾಗು ಕಿಕ್ಕೇರಮ್ಮ ದೇವಸ್ಥಾನದಲ್ಲಿ ಜ. 19ರ ರಾತ್ರಿ ಕಳ್ಳತನ ನಡೆದಿದೆ. ಬೀಗ ಮುರಿದು ಒಳನುಗ್ಗಿರುವ ಕಳ್ಳರು 4 ಹುಂಡಿ ಒಡೆದು ಅದರಲ್ಲಿದ್ದ ಅಂದಾಜು 1 ಲಕ್ಷ ರೂ. ಹಾಗು 40 ಸಾವಿರ ರೂ. ಮೌಲ್ಯದ ಚಿನ್ನದ ತಾಳಿ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜನವರಿ-23

1556: ಚೀನಾದ ಶಾನ್‌ಶಿ ಪ್ರಾಂತ್ಯದಲ್ಲಿ ಭೀಕರ ಭೂಕಂಪ, ಲಕ್ಷಾಂತರ ಮಂದಿ ಪ್ರಾಣ ಕಳೆದುಕೊಂಡರು.

1909: ಕ್ಯೂಬಾದಲ್ಲಿ ಭೂಕಂಪ ಸಂಭವಿಸಿ ಹವಾನಾ ನಗರದಲ್ಲಿ ಭಾರೀ ಹಾನಿ.

1960: ಸ್ವಿಟ್ಜರ್ಲ್ಯಾಂಡ್‌ನ ಪಿಕಾರ್ಡ್ ಮತ್ತು ವಾಲ್ಷ್ ಅಟ್ರಿಯೆಸ್ಟ್ ಜಲಾಂತರ್ಗಾಮಿ ನೌಕೆಯಲ್ಲಿ ಪೆಸಿಫಿಕ್ ಸಾಗರದ ಅತೀ ಆಳವಾದ ಪ್ರದೇಶ ಅಮರಿಯಾನಾ ಟ್ರೆಂಚ್ ತಲುಪಿದರು.

1986: ಅಮೆರಿಕದ ಅವಾಯೆಜರ್-2 ಯಾನವು ಯುರೇನಸ್ ಗ್ರಹದ ಸಮೀಪ ಹಾದು ಅದರ ವಿವರವಾದ ಚಿತ್ರಗಳನ್ನು ಭೂಮಿಗೆ ಕಳುಹಿಸಿತು.

### ಜನನ

1897: ನೇತಾಜಿ ಸುಭಾಷ್ ಚಂದ್ರ ಬೋಸ್ (ಭಾರತ)

1832 ಎಡ್ವರ್ಡ್ ಡಬ್ಲ್ಯು ಬ್ರೂಸ್ (ಅಮೆರಿಕನ್ ರಾಜಕಾರಣಿ)

1957 ರಣವೀರ್ ಸಿಂಗ್ (ಭಾರತೀಯ ಚಿತ್ರನಟ)

### ನಿಧನ

1924: ವುಡ್ರೋ ವಿಲ್ಸನ್, ಅಮೆರಿಕದ 28ನೇ ರಾಷ್ಟ್ರಪತಿ

1939: ಚಾರ್ಲ್ಸ್ ಡಿ. ಡಾರ್ವಿನ್, ಬ್ರಿಟಿಷ್ ವಿಜ್ಞಾನಿ

1996: ಅಮಿತಾಭ್ ಚಕ್ರವರ್ತಿ, ಭಾರತೀಯ ಸಾಹಿತ್ಯಕಾರ

# ಜಿಲ್ಲಾ ಸಮಗ್ರ ಸುಸ್ಥಿರ ಅಭಿವೃದ್ಧಿ 2031ರ ಕಾರ್ಯಾಗಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031ರ ಅಂಕಿ ಅಂಶದ ಆಧಾರದ ಮೇಲೆ ಮುಂದಿನ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದ್ದಾರೆ.



ತಾಯಂದಿರ ಮರಣ, ಶಿಶು ಮರಣ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆ, ಇವುಗಳನ್ನು ನಿಖರವಾಗಿ ದಾಖಲಿಸಬೇಕು. ಗ್ರಾಪಂ ಮಟ್ಟದಲ್ಲಿ 17 ಮಾನದಂಡಗಳನ್ನು ಗುರುತಿಸಲಾಗಿದೆ ಅದರಂತೆ ವರದಿ ತಯಾರಿಸಬೇಕು ಎಂದರು.

ಜಿಲ್ಲಾ ಪಂಚಾಯಿತಿಯ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ-2031 ತರಬೇತಿ ಕಾರ್ಯಾಗಾರ್ನ ಉದ್ಘಾಟಿಸಿ ಮಾತನಾಡಿದರು.

ಜೀವನದ ಗುಣಮಟ್ಟ, ಶಿಕ್ಷಣ ಮತ್ತು ಆರೋಗ್ಯವನ್ನು ಮೂಲ ಮಾನದಂಡವಾಗಿ ಪರಿಗಣಿಸಲಾಗುತ್ತದೆ. ಕರ್ನಾಟಕದಲ್ಲಿ ಬಡತನ ರೇಖೆಗಿಂತ ಶೇ.26 ಜನರು ಇದ್ದಾರೆ. ಭಾರತದಲ್ಲಿ ಶೇ.80 ಸಾಕ್ಷರತೆ ಇದೆ. ಆಹಾರ ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿ ಇದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು ನಿಖರವಾಗಿ ತಯಾರಿಸಬೇಕು. ಆದ್ದರಿಂದ ಸಂಬಂಧಿಸಿದ ಇಲಾಖೆಗಳು ಮಾಹಿತಿಯನ್ನು ಫೆ. 10ರ ಒಳಗೆ ವರದಿ ನೀಡಬೇಕೆಂದು ತಿಳಿಸಿದರು.

ಇಲಾಖೆಗಳಿಗೆ ಬಂದಿರುವ ಅನುದಾನ ಯಾವುದೇ ರೀತಿ ವ್ಯರ್ಥವಾಗಬಾರದು. ಅನುದಾನ ಮಾರ್ಚ್ ವೇಳೆಗೆ ಶೇ.100 ರಷ್ಟು ಸದ್ಬಳಕೆ ಆಗಬೇಕು. ಈ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಯೋಜನೆ ರೂಪಿಸಿಕೊಳ್ಳಬೇಕು ಎಂದು ಸೂಚಿಸಿದರು.

ಎಸ್‌ಐಆರ್‌ಡಿ ಸಂಸ್ಥೆಯ ಸಮಾಲೋಚಕ ಗಣೇಶ್ ಪ್ರಸಾದ್ ಮಾತನಾಡಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿ 2025 ಹಾಗೂ ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ 2031 ದೇಶದ ಪ್ರಗತಿಯನ್ನು ತಿಳಿಸುವ ಕನ್ನಡಿಯಾಗಿದೆ ಎಂದು ತಿಳಿಸಿದರು.

ಸದರಿ ವರದಿಗಳು ಒಳಗೊಂಡಿರುವ ಸೂಚಕಗಳು/ಇಂಡಿಕೇಟರ್ಸ್ ಗಳ ಬಗ್ಗೆ ತಿಳಿಸುತ್ತಾ, ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿ ಒದಗಿಸುವ ಬಗ್ಗೆ ಯಾವ ರೀತಿ ಮಾಹಿತಿಯನ್ನು ನಿಖರವಾಗಿ ಕ್ರೂಢೀಕರಿಸುವುದೆಂದು ತಿಳಿಸಿದರು.

ಭಾರತದಲ್ಲಿ ಪ್ರತಿ 10 ವರ್ಷಕ್ಕೆ ಒಮ್ಮೆ ಜನಗಣತಿ ಮಾಡಲಾಗುತ್ತದೆ. ರೈಲ್ವೆ ಸಾರಿಗೆಯಲ್ಲಿ ಪ್ರಪಂಚದಲ್ಲಿಯೇ ಮೊದಲ ಸ್ಥಾನದಲ್ಲಿ ಇದ್ದೇವೆ. ಆರೋಗ್ಯ ಸೇವೆ ಉತ್ತಮವಾಗಿದೆ. ನಮ್ಮ ದೇಶ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಹಲವು ಕೊರತೆಗಳನ್ನು ಸಹ ಎದುರಿಸುತ್ತಿದೆ ಎಂದರು.

ಮಾನವ ಅಭಿವೃದ್ಧಿ ಸೂಚ್ಯಂಕ 0-1 ವರೆಗೆ ಮಾಡಲಾಗುತ್ತದೆ. ರಾಜ್ಯ ಮಟ್ಟದ ಮಾನವ ಅಭಿವೃದ್ಧಿ ವರದಿ ಸಿದ್ಧಪಡಿಸಿದ್ದು ಮಧ್ಯಪ್ರದೇಶ 1999, 2005 ಹಾಗೂ 2015 ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಸಿದ್ಧಪಡಿಸಲಾಗಿತ್ತು ಅದರಂತೆ 2025 ರಲ್ಲಿ ಸಿದ್ಧಪಡಿಸಲಾಗುತ್ತಿದೆ ಎಂದರು.

ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ 0.629 ಇದೆ. ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕ 0.644 ಇದೆ ಎಂದು ಅವರು ಹೇಳಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ಎನ್. ಕೃಷ್ಣಮೂರ್ತಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಜನವರಿ 23 ಪರಾಕ್ರಮ ದಿನ: ಏನಿದರ ಮಹತ್ವ!

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಜನವರಿ 23 ರಂದು ಆಚರಿಸುವ ಪರಾಕ್ರಮ ದಿನವು ಅಜೇಯ ಧೈರ್ಯ ಮತ್ತು ಅಚಲ ರಾಷ್ಟ್ರಪ್ರೇಮದ ಸಂಕೇತವಾದ ಸುಭಾಷ್ ಚಂದ್ರ ಬೋಸ್ (ನೇತಾಜಿ) ಅವರ ಜನ್ಮದಿನದ ಸ್ಮರಣೆ ಆಗಿದೆ. ಅನನಗೆ ರಕ್ತ ಕೊಡಿ, ನಿಮಗೆ ಸ್ವಾತಂತ್ರ್ಯ ತರುತ್ತೇನೆಟಿ ಎಂಬ ಅವರ ಘೋಷಣೆ ಯುವ ಹೃದಯಗಳಲ್ಲಿ ಕ್ರಿಯಾಶೀಲತೆ, ಶಿಸ್ತು ಮತ್ತು ತ್ಯಾಗದ ಅಗ್ನಿಯನ್ನು ಹೊತ್ತಿಸುತ್ತದೆ. ಕೇವಲ ಕನಸುಗಳಲ್ಲ, ಕಾರ್ಯದಲ್ಲೇ ದೇಶಭಕ್ತಿ ವ್ಯಕ್ತವಾಗಬೇಕು ಎಂಬ ನೇತಾಜಿಯವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಇದೇ ವೇಳೆ, ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿ ಹಾಗೂ ಸಾಮಾಜಿಕ ನ್ಯಾಯದ ದೀಪಸ್ತಂಭರಾದ ಭೀಮರಾವ್ ರಾಮಜಿ ಅಂಬೇಡ್ಕರ್ ಅವರು ಸಮಾನತೆ, ಮಾನವ ಗೌರವ ಮತ್ತು ಶಿಕ್ಷಣದ ಮಹತ್ವವನ್ನು ಬೋಧಿಸಿದರು. ಅಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಡಿರಿಟಿ ಎಂಬ ಅವರ ಕರೆ ಸಮಾಜದ ಒಳಗಿನ ಅಸಮಾನತೆಯ ವಿರುದ್ಧದ ಶಾಶ್ವತ ಹೋರಾಟವಾಗಿದೆ. ನೇತಾಜಿಯವರ ಪರಾಕ್ರಮವು ವಿದೇಶಿ ಆಳ್ವಿಕೆಗೆ ಸವಾಲಾಗಿದ್ದರೆ, ಅಂಬೇಡ್ಕರ್ ಅವರ ಚಿಂತನೆಗಳು ಸಮಾಜದ ಒಳಗಿನ ಅನ್ಯಾಯಕ್ಕೆ ಉತ್ತರವಾಗಿವೆ. ಮಾರ್ಗಗಳು ವಿಭಿನ್ನವಾದರೂ ಗುರಿ ಒಂದೇ ಸ್ವತಂತ್ರ, ನ್ಯಾಯಸಮ್ಮತ ಮತ್ತು ಶಕ್ತಿಶಾಲಿ ಭಾರತ. ಇಂದಿನ ಯುವಜನತೆ ನೇತಾಜಿಯವರ ಧೈರ್ಯವನ್ನು ಅಂಬೇಡ್ಕರ್ ಅವರ ಬುದ್ಧಿವಂತಿಕೆ ಮತ್ತು ಸಂವಿಧಾನಾತ್ಮಕ ಮೌಲ್ಯಗಳೊಂದಿಗೆ ಜೋಡಿಸಿದಾಗ ಮಾತ್ರ ರಾಷ್ಟ್ರನಿರ್ಮಾಣ ಸಾಧ್ಯ, ಪರಾಕ್ರಮ ದಿನವು ದೇಶಕ್ಕಾಗಿ ಬದುಕಿ, ಸಮಾಜಕ್ಕಾಗಿ ಹೋರಾಡಿ, ಭವಿಷ್ಯವನ್ನು ರೂಪಿಸಿರಿ ಎಂಬ ಪ್ರೇರಣೆಯ ಘೋಷವಾಗಿದೆ.

– ಅಂತೋಣಿ ಮುತ್ತು ವಿ. ಶಿಕ್ಷಕರು
ಮೊ.ನಂ. 9449376695

# ಕರ್ತವ್ಯದ ಒತ್ತಡ: ಆತ್ಮಹತ್ಯೆಗೆ ಯತ್ನಿಸಿದ ಶಿರಸ್ತೇದಾರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತನಗೆ ಅನಾರೋಗ್ಯವಿದ್ದರೂ ಅಧಿಕ ಕೆಲಸ ನೀಡುತ್ತಿದ್ದಾರೆಂದು ಆರೋಪಿಸಿ ತಹಶೀಲ್ದಾರ್ ಕಚೇರಿ ಶಿರಸ್ತೇದಾರ್ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ವಿರುದ್ಧ ಗಂಭೀರ ಆರೋಪ ಮಾಡಿರುವ ಶಿರಸ್ತೇದಾರ್ ತನ್ವೀರ್ ಅಹಮದ್ ಆತ್ಮಹತ್ಯೆಗೆ ಯತ್ನಿಸಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ತಹಶೀಲ್ದಾರ್ ಅವರು ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಉದ್ದೇಶಪೂರ್ವಕವಾಗಿ ಹೆಚ್ಚುವರಿ ಕೆಲಸ ನೀಡುತ್ತಾರೆ. ಬೇರೆ ಸಿಬ್ಬಂದಿ ಇದ್ದರೂ ನನ್ನನ್ನೇ ಗುರಿಯಾಗಿಸಿಕೊಂಡಿದ್ದಾರೆ. ನನ್ನ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಹೆದರಿಸುತ್ತಾರೆ. ಮಧುಮೇಹ ಮತ್ತಿತರ ಕಾಯಿಲೆಯಿಂದ ನಾನು ಬಳಲುತ್ತಿದ್ದರೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಯಾವ ತಪ್ಪು ಮಾಡದಿದ್ದರೂ ಇಲ್ಲಸಲ್ಲದ



ಆರೋಪ ಮಾಡುತ್ತಿದ್ದಾರೆ.

ಹೀಗಾಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದೇನೆ ಎಂದು ತನ್ವೀರ್ ಅಹಮದ್ ಹೇಳಿದ್ದಾರೆ.

ಈ ಕುರಿತು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, 2026ರ ಸಾಲಿನಲ್ಲಿ ಕೇಂದ್ರ ಸರ್ಕಾರವು ಜನಗಣತಿ ನಡೆಸಲು ನಿರ್ದೇಶನ ನೀಡಿದೆ.

ಶಿರಸ್ತೇದಾರ್ ತನ್ವಿರ್ ಅಹಮದ್ ಅವರನ್ನು ಮೇಲ್ವಿಚಾರಣೆಗೆ ನೇಮಿಸಲಾಗಿದೆ ಹೊರತು ಹೆಚ್ಚು ಕೆಲಸ ನೀಡಿಲ್ಲ.

ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಾರೆಂಬ ಕಾರಣಕ್ಕೆ ಅವರಿಗೆ ಮಹತ್ವದ ಜವಾಬ್ದಾರಿ ನೀಡಲಾಗಿದೆ. ಇಲಾಖೆಯಿಂದ ನೀಡಿದ ಆದೇಶ ಪತ್ರವನ್ನು ಟೇಬಲ್ ಮೇಲಿಟ್ಟು ಕೆಲಸ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು. ಅದಕ್ಕೆ ನಾನು ಲಿಖಿತ ರೂಪದಲ್ಲಿ ಕಾರಣ ನೀಡುವಂತೆ ಸೂಚಿಸಿದೆ.

ಅಷ್ಟಕ್ಕೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೊರಗೆ ಹೋಗಿದ್ದಾರೆ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248